ಆಮೇಲೆ ಮುಕುಂದ ಕೋಕಿಲಾ ಸಹ ನನ್ನನ್ನು ದಾಡೀ ಎಂದೇ ಕರೆಯುತ್ತಿದ್ದರು. ನನ್ನ ಮದುವೆಯ ಸಂದರ್ಭದಲ್ಲಿ ನಾನು ದಾಡಿ ತೆಗೆದಿದ್ದೆ. ಮದುವೆಯಲ್ಲಿ ನನಗೆ ಶುಭಕೋರಲು ಬಂದಾಗ ಅವರೆಲ್ಲ ಒಕ್ಕೊರಲಿನಲ್ಲಿ ಕೇಳಿದ್ದು – "ಅರೇ 'ದಾಡಿ' ಕಿಧರ್ ಹೈ?"

ನನ್ನ ಸಂಗಾತಿ ಸ್ಮಿತಾ, ಮರಾಠಿ ಕಥನೇತರ ಓದಿನ ಆಸಕ್ತಳಾದ್ದರಿಂದ ಯಾವುದೇ ಅಂಥ ಹೊಸ ಪುಸ್ತಕ ಬಂದಾಗ ಮುಕುಂದ, ತಮ್ಮ ಕಾಲೇಜಿನ ಲೈಬ್ರರಿಯಿಂದ ಓದಲು ತಂದುಕೊಡುತ್ತಿದ್ದರು. ಢಸಾಳ ಅವರ ಪತ್ನಿ ಮಲಿಕಾ ಅಮರ್ ಶೇಖ್ ಅವರ "ಮಲಾ ಉಧ್ವಸ್ಥ ವ್ಹಾಯ್‌ಚ ಆಹೇ" (ಉಧ್ವಸ್ಥಳಾಗಬಯಸುವೆ), ಪು.ಲ. ದೇಶಪಾಂಡೆ ಅವರ ಪತ್ನಿ ಸುನೀತಾ ದೇಶಪಾಂಡೆ ಬರೆದ "ಆಹೇ ಮನೋಹರ ತರೀ" (ಮನೋಹರ ಹೌದು, ಆದರೂ...) ಇವನ್ನು ಓದಲೇಬೇಕು ಎಂದು ಹಟಮಾಡಿ ನಮ್ಮಿಂದ ಓದಿಸಿ ನೆಮ್ಮದಿ ಪಟ್ಟವರು. ಅವರಿಗೆ ತಲತ್ ಎಷ್ಟು ಇಷ್ಟವೋ, ಜ್ಞಾನೇಶ್ವರಿ ಎಷ್ಟು ಇಷ್ಟವೋ ಅಮಿತಾಭ್ ಬಚ್ಚನ್ ಕೂಡ ಅಷ್ಟೇ ಇಷ್ಟ. ಅವನ ಖರಾಬು ಚಿತ್ರಗಳನ್ನೂ ಕೂಡ ವಿಡಿಯೊ ಲೈಬ್ರರಿಯಿಂದ ಕ್ಯಾಸೆಟ್ ತರಿಸಿಕೊಂಡು ನೋಡುತ್ತಿದ್ದರು. "ಅಮಿತಾಭ್ ಒಂದ್ ಪಿಕ್ಚರ್‌ನ್ಯಾಗ ವ್ಹಿಲನ್ ಆಗ್ಯಾನ. ಯಾವುದು ಹೇಳ್ರಿ ನೋಡೋಣ" – ಎಂದು, ಅದರ ಉತ್ತರ ಗೊತ್ತಿರದಿದ್ದರೆ ನಮ್ಮ ಬಾಳುವೆಯೇ ವ್ಯರ್ಥ ಅನ್ನೋ ಥರದ ನೋಟದಲ್ಲಿ ನಮ್ಮನ್ನು ಕೆಣಕುತ್ತಿದ್ದರು. ಉತ್ತರ ಗೊತ್ತಿದ್ದರೂ ಅವರಿಗೆಲ್ಲಿ ನಿರಾಸೆ ಆದೀತು ಎಂದು ಸುಮ್ಮನಿರುತ್ತಿದ್ದೆವು. ಆಗ ಅವರು ವಿಜಯೋತ್ಸಾಹದಿಂದ "ಪರ್‌ವಾನಾ" ಅಂತ ಹೇಳಿ – "ಅದ್ರಾಗ ಮರ್ಡರ್ ಮಾಡಾಕ ಏನ್ ಐಡಿಯಾ ಮಾಡ್ಯಾನ್ರೀ ಅಂವಾ" ಅಂತ ವಿವರವಾಗಿ ಅಮಿತಾಭನೇ ಸ್ವತಃ ಐಡಿಯಾ ಮಾಡಿದಾನೋ ಎಂಬಂತೆ ಸಂಭ್ರಮಿಸಿ ಹೇಳುತ್ತಿದ್ದರು. ಬೀರಡಿಕೆ ಉಲ್ಬಣಿಸಿದಾಗೆಲ್ಲ ಅಜಿತ್ ಪಂಜಾಬ ಎಂಬ ಇರಾಣಿ ಛಾಪಿನ ಸರಳ ಹೋಟೆಲಿನಲ್ಲಿ ಕೂತು ತುಂಬಾ ಹರಟುತ್ತಿದ್ದೆವು. ತೆಳ್ಳಗೆ ಇದ್ದ ಅವರ ತಲೆಯಲ್ಲಿ ಹುಲುಸಾದ ಕೂದಲಿತ್ತು. ಚೀನಿ ಕಣ್ಣುಗಳಂತೆ ತುಸು ಚಿಕ್ಕದಾಗಿದ್ದ ಕಣ್ಣುಗಳಲ್ಲಿ, ಅವರು ಹೃತ್ಪೂರ್ವಕವಾಗಿ ನಕ್ಕಾಗೆಲ್ಲ ಬೇಗನೆ ನೀರು ಬರುತ್ತಿತ್ತು.

ನಮ್ಮ ಬ್ರಹ್ಮಚಾರಿ ಕೂಟದಲ್ಲಿ ಯಾರದೇ ಮದುವೆಯಾದರೂ ಮುಕುಂದ – ಕೋಕಿಲಾ ದಂಪತಿ ಪಾಲಕರಂತೆ ಮುಂದಾಗಿ ನೆರವಾಗುತ್ತಿದ್ದರು. ಗೆಳೆಯ ಕುಮಾರ ಅಂತರ್‌ಜಾತಿ ವಿವಾಹವಾದಾಗ, ಹುಡುಗಿಯ ಕಡೆಯಿಂದ ಯಾರೂ ಬರದಿದ್ದಾಗ ಇವರೇ ಹುಡುಗಿಯ ಪಾಲಕರಾಗಿ ನಿಂತು "ಆರ್ಯ ಸಮಾಜ" ಹಾಲ್‌ನಲ್ಲಿ, ಕನ್ಯಾದಾನ ಮಾಡಿದರು. ಬಲು ವರುಷಗಳ ಹಿಂದೆ ಮೀರಜ್‌ನಲ್ಲಿ ಅವರಿಬ್ಬರ ಜಂಕ್ಷನ್ ಆದಾಗ – ಕೋಕಿಲಾರ ಕಡೆಯಿಂದ ಯಾರೂ ಬಂದಿರದ್ದರಿಂದ ಮುಂಬಯಿಯ ಹಿರಿಯ ಪ್ರಾಧ್ಯಾಪಕ, ಸಾಹಿತಿ, ಕನ್ನಡ ಸಂಘಟಕ ಪ್ರೊ. ಜಿ.ಡಿ. ಜೋಷಿಯವರೇ ನಿಂತು 'ಕನ್ಯಾದಾನ' ಮಾಡಿದ್ದರಂತೆ. ಅದರ ಮುಂದುವರೆದ ಸಾಮಾಜಿಕ ಋಣ ಇದು. ಕಾಯಿಲೆ ಇತ್ಯಾದಿ ಆದಾಗೆಲ್ಲ ನಾನಂತೂ ಅವರ ಮನೆಯಲ್ಲೇ ಹೋಗಿ ಇದ್ದುಬಿಡುತ್ತಿದ್ದೆ. ಕೋಕಿಲಾ ಮೇಡಂ ಆಗ, "ದಾಡೀ, ಇಂದಲ್ಲ ನಾಳೆ ನಿನ್ನದೂ ಮದುವೆ, ಮನೆ ಎಲ್ಲ ಆಗಬೇಕು. ಈಗಿನಿಂದಲೇ ಚೂರು ಪಾರು ಸೇವ್ ಮಾಡು. ಈ ಮುಕುಂದನ ಮಾತು ಕೇಳಿ ಬೀಯರು ಗೀಯರು ಅಂತ ಪೋಲು ಮಾಡಬೇಡ. ಸೇವ್ ಮಾಡು. ಎರಡು ಸಾವಿರ ಆದದ್ದೇ ಎಫ್.ಡಿ. ಮಾಡು. ಮದುವೆ, ಸಂಸಾರ ಎಲ್ಲ ಸಲೀಸಲ್ಲ. ನಿಮ್ಮ ಕಾವ್ಯ ಗೀವ್ಯ, ಪ್ಯಾಸಾ ಗೀಸಾ ಯಾವುದೂ ನೆರವಿಗೆ ಬರುದಿಲ್ಲ. (ಪೋಯಟ್ರಿ ಗೀಯಟ್ರಿ ಪ್ಯಾಸಾ ವ್ಯಾಸಾ ಕುಛ್ ಕಾಮ್ ನಹೀ ಆಯೇಗಾ)"– ಎಂದು ಕಡಕ್ ಆಗಿ ತಿಳಿಹೇಳುತ್ತಿದ್ದರು. ನನಗದು ಯಾವುದೋ ಫೈನಲ್ ಎಕ್ಸಾಮ್‌ನ ಪ್ರಶ್ನೆ ಪತ್ರಿಕೆ ಥರ ಕೇಳಿಸುತ್ತಿತ್ತು. ನಾವೆಲ್ಲ 'ಉಮ್ರಾವ್ ಜಾನ್' (ರೇಖಾ) ಚಿತ್ರ ನೋಡಿ ಹೊರಬರುವಾಗ – ಕೊನೆಯ ದೃಶ್ಯದಲ್ಲಿ ಎಷ್ಟೋ ದಶಕಗಳ ನಂತರ ಉಮ್ರಾವ್‌ಳನ್ನು ಆಕೆಯ ದುರ್ದೆಸೆಯಲ್ಲಿ ನೋಡಿದ ಆಕೆಯ ತಾಯಿಯ ರೋದನ ಕೋಕಿಲಾ